ಸಾಹಿತ್ಯ ಕೃತಿಗಳಲ್ಲಿನ ಸರಸ–ಸಲ್ಲಾಪಗಳ ಘನತೆವೆತ್ತ ಸಾಲುಗಳನ್ನು ಓದಿದವರಿಗೂ ಈ ಹೊತ್ತಿನ ಸ್ಟ್ಯಾಂಡ್‌ಅಪ್ ಕಾಮಿಡಿಗಳು, ರಿಯಾಲಿಟಿ ಶೋಗಳು ಕಾಣಿಸುತ್ತಿರುವ, ಕೇಳಿಸುತ್ತಿರುವ ಹಾಸ್ಯವಲ್ಲರಿ ಚಕಿತಗೊಳಿಸುತ್ತಿದೆ. ಮುದನೀಡುವ ಇಂತಹ ಕಂಟೆಂಟ್ ಲಲನೆಯರ ಬಾಯಲ್ಲಿ ನಿರ್ಭಿಡೆಯಿಂದ ಹೊರಬರುತ್ತಿರುವ ಮರ್ಮವಾದರೂ ಏನು? ಹಾಸ್ಯ ಕಾಲವಶವಾಯಿತೆ? ಅಭಿರುಚಿ ಗಟಾರ ಸೇರಿತೆ? ಅಥವಾ, ಹಾಸ್ಯದ ನಾವೆ ತನ್ನೆಲ್ಲ ಕಟ್ಟುಪಾಡುಗಳನ್ನು ಕಳಚಿಕೊಂಡು, ಇಡೀ ವಿಶ್ವವನ್ನೇ ತನ್ನ ಅಂಗಳವನ್ನಾಗಿಸಿಕೊಂಡು ಮುಕ್ತವಾಗಿ ವಿಹರಿಸುತ್ತಿದೆಯೇ? ಸುಲಭ ವಿಶ್ಲೇಷಣೆಗೆ ನಿಲುಕದ ಈ ಪ್ರಶ್ನೆಗಳು – ಹೊಸ ತಲೆಮಾರಿನ ಹಾಸ್ಯದ ಭಾಷೆಯ ಬದಲಾವಣೆಗೂ ಸಾಮಾಜಿಕ ವ್ಯವಸ್ಥೆಯಲ್ಲಾದ ಪಲ್ಲಟಗಳಿಗೂ ಇರುವ ಸಂಬಂಧದ ಕುರಿತು ಗಮನಸೆಳೆಯುತ್ತವೆ.

■ ವಿಶಾಖ ಎನ್.

